ಶ್ರೀ ಎಂ. ಎಸ್. ಕೃಷ್ಣನ್ :—ಮೆಮೊರ್ಯಾಂಡಂನ್ನು ಮುಖ್ಯ ಮಂತ್ರಿಗಳಿಗೆ ಕೊಟ್ಟ ತಾರೀಖು ಯಾವುದು ?

ಶ್ರೀ ಕೆ. ಪುಟ್ಟಸ್ವಾಮಿ :— ೯-೧೦-೧೯೬೯.

ಶ್ರೀ ಎಂ. ಎಸ್. ಕೃಷ್ಣನ್ :— (ಬಿ)ಗೆ ಉತ್ತರವಾಗಿ ಯಾವ ಭರವಸೆಯನ್ನೂ ಕೊಟ್ಟಿಲ್ಲ ಎಂದು ಹೇಳಿದ್ದೀರಿ. ನನಗೆ ಬಂದಿರುವ ವರದಿ ಪ್ರಕಾರ ಮುಖ್ಯ ಮಂತ್ರಿಗಳಿಗೆ ಕೆಲಸಗಾರರು ಮೆಮೋರ್ಯಾಂಡಂನ್ನು ಕೊಟ್ಟಾಗ ಇದರ ಚಾರ್ಜುಗಳನ್ನು ಪರಿಶೀಲಿಸುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದರಂ ಈಗ ಇಲ್ಲ ಎಂದು. ಇಲ್ಲಿ ಹೇಳಲು ಕಾರಣವೇನು ?

ಶ್ರೀ ಕೆ. ಪುಟ್ಟಸ್ವಾಮಿ :— ಅದು ನನಗೆ ಗೊತ್ತಿಲ್ಲ.

SRI M. S. KRISHNAN :— I want a clarification whether the Chief Minister has given the assurance. The Hon. Minister is saying no. We would like to know from the Chief Minister whether the assurance was given or not.

MR. SPEAKER :— I cannot compel the Chief Minister to be present in the House to reply to this question.

SRI K. PUTTASWAMY :— This answer is given on behalf of the Government which includes the Chief Minister.

ಶ್ರೀ ಎಂ. ಎಸ್. ಕೃಷ್ಣನ್ :— ತಾವು (ಡಿ)ಗೆ ಉತ್ತರವಾಗಿ ಇಲ್ಲಿ ಕೊಡುವ ವೇತನಗಳು ಬಹಳ ಕಡಿಮೆ ಎಂದು ಒಪ್ಪಿದ್ದೀರಿ. ಇದರಿಂದ ತಾವು ಇದನ್ನು ಪುನರ್ವಿಮರ್ಶೆ ಮಾಡಿ ಇವರಿಗೆ ಮಿನಿಮಂ ವೇಜಸ್ ದೊರಕುವಂತೆ ಮಾಡಿ ಇದನ್ನು ಇತ್ಯರ್ಥ ಮಾಡಲು ಸಾಧ್ಯವಾಗುವುದಿಲ್ಲವೇ?

SRI K. PUTTASWAMY :— In this industry, unfortunately the minimum wages have not been fixed. Now Government will have to consider whether under the existing state of affairs it requires consideration of fixing minimum wages for this industry also.

ಶ್ರೀ ಎಂ. ಎಸ್. ಕೃಷ್ಣನ್ :— ಮಿನಿಮಂ ವೇಜಸ್ ಎಂದು ಬೆಂಗಳೂರಿನಲ್ಲಿರುವ ಪ್ಲೈವುಡ್ ಕಮರ್ಷಿಯಲ್ ಯೂನಿಯನ್ ಹಾಗೂ ಇನ್ನಿತರ ಕಡೆಗಳಲ್ಲಿ ಕೆಲಸಗಾರರಿಗೆ ಒಂದಕ್ಕೆ ನಾಲ್ಕರಷ್ಟು ಐದರಷ್ಟು ಡಿ.ಎ. ಎಂದು ಹೆಚ್ಚಾಗಿ ಕೊಡುತ್ತಿದ್ದಾರೆ. ಇವರಿಗೂ ಆದೇ ರೀತಿ ಜಾಸ್ತಿ ಮಾಡಲು ಸರಕಾರ ಸ್ವಲ್ಪ ಆಸಕ್ತಿ ವಹಿಸಿ ಸಹಾಯ ಮಾಡಲು ಆಗುವುದಿಲ್ಲವೇ ?

SRI K. PUTTASWAMY :— I cannot give such an assurance to the Hon. Member.

TAKING OVER OF MUNICIPAL HIGH SCHOOLS

353. Sri K. M. THAMMAIAH (Kadur).—Will the Minister for Education be pleased to state.—

(*a*) the authority under whom the Head Master and staff of Municipal High Schools are working;

(*b*) the transferring authority in respect of Head Masters and staff of these High Schools whether it is the Chairman of the Municipal High School or the D. P. I.

(c) whether there is any proposal before Government to take over all the Municipal High Schools in the State under the administrative control of Government.

A.—Sri. N. M. KOTRABASIAH SOGI Deputy Minsiter for Education.

(*a*) The Head Masters and other staff members of the Municipal High Schools in ex-Mysore are under the control of the Mangement Committees and the respective Deputy Commissioners who are the Unit Officers.

The Head Masters and other staff members of Municipal High Schools in other areas are under the control of the Town Municipal Council.

(*b*) Divisional Commissioners are empowered to transfer Municipal employees (including those appointed in Municipal Schools) within their respective Divisions So far as inter divsional transfers of Municipal employees are concerned, Government is the competent authority to order them.

(*c*) Yes.

ಶ್ರಿ ಕೆ ಎಂ ತಮ್ಮಯ್ಯ : ಹಳೆಯ ಮೈಸೂರಿನಲ್ಲಿರುವ ಪ್ರೌಢ ಶಾಲೆಗಳು ಮತ್ತು ಇದರಲ್ಲಿರುವ ಉಪಾಧ್ಯಾಯುರಗಳು ಆಡಳಿತಮಂಡಲಿಗಳ ಅಧಿಕಾರಕ್ಕೆ ಒಳಪಟ್ಟಿದೆ ಎಂದು ಹೇಳಂತ್ತೀರಿ. ಆದರೆ ಇಲ್ಲಿರುವ ಆಡಳಿತಮಂಡಲಿಗಳು ಸರಕಾರಕ್ಕೆ ವರದಿ ಕಳುಹಿಸಿ ತುರ್ತಾಗಿ ಇಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರೂ ಕ್ರಮ ತೆಗೆದುಕೊಳ್ಳದೇ ಇರಲು ಕಾರಣಏನು.?

†ಶ್ರೀ ಎನ್ ಎಂ ಕೊಟ್ರಬಸಯ್ಯ ಸೋಗಿ : ಅಂತಹ ಯಾವುದಾದರೂ ಕ್ರಮಗಳನ್ನು ತೆಗೆದುಕೊಳ್ಳ ಬೇಕೆಂದು ಸರ್ಕಾರದ ಗಮನಕ್ಕೆ ತಂದರೆ, ಕಾಯದೆ ಪ್ರಕಾರ ಏನು ಕ್ರಮ ತೆಗೆದುಕೊಳ್ಳ ಬಹುದೋ ಅವನ್ನು ತೆಗೆದುಕೊಳ್ಳಲು ಆಗುತ್ತದೆ.

ಶ್ರೀ ಕೆ ಎಂ ತಮ್ಮಯ್ಯ : ಇಲ್ಲಿನ ಮ್ಯಾನೇಜುಮೆಂಟಿನವರು ಸರ್ಕಾರಕ್ಕೆ ಹೇಳಿ ಸುಮಾರು ಒಂದೆರಡು ವರ್ಷಗಳಾದರೂ ಸರಕಾರ ಇದರ ಬಗ್ಗೆ ಯಾವ ಉತ್ತರವನ್ನೂ ಇದುವರೆಗೆ ಕಳುಹಿಸಲಿಲ್ಲ ಈಗಲಾದರೂ ಇದರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್ ಎಂ ಕೊಟ್ರಬಸಯ್ಯ ಸೋಗಿ : ಈಗ ಇಂತಹ ಶಾಲೆಗಳ ಶಿಕ್ಷಕರ ಬಗ್ಗೆ ಕ್ರಮ ತೆಗೆದುಕೊಳ್ಳುವ ಅಧಿಕಾರ ಡಿವಿಜನಲ್ ಕಮೀಷನರ್‌ರವರ ಕಡೆಗೆ ಇದೆ. ಡಿವಿಜನಲ್ ಕಮೀಷನರವರು ಪರಿಶೀಲಿಸಿದ ನಂತರ ಸರಕಾರಕ್ಕೆ ಬರುವ ವಿಚಾರ ಇದ್ದರೆ ನಮಗೆ ಬರುತ್ತದೆ. ಇಲ್ಲದೇ ಇದ್ದರೆ ಅವರೇ ತಕ್ಕ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಡಿವಿಜನಲ್ ಕಮೀಷನರವರು ಸರಕಾರಕ್ಕೆ ಕಳುಹಿಸಿದ್ದರೆ ಇದರ ಮೇಲೆ ಸರಕಾರ ಕ್ರಮ ತೆಗೆದುಕೊಳ್ಳಲು ಬರುತ್ತದೆ.

---

†Asterisks indicates that remarks or speaches have not been revised by the member concerned.

ಶ್ರೀ ಜಿ. ಆರ್. ಹಾಲಸ್ವಾಮಿ.— (೫) ಪ್ರಶ್ನೆಗೆ ಉತ್ತರವಾಗಿ ಇದೆ ಎಂದು ಹೇಳಿದ್ದೀರಿ. ಈ ಸಲಹೆಯನ್ನು ಜಾಗ್ರತೆ ಕಾರ್ಯರೂಪಕ್ಕೆ ತರುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ : ಆ ಬಗ್ಗೆ ವಿವರಗಳನ್ನು ಪರಿಶೀಲನೆ ಮಾಡುತ್ತಿದ್ದೇವೆ. ವಿವರಗಳು ದೊರಕಿದ ನಂತರ ಪರಿಶೀಲನೆ ಮಾಡಬೇಕಾಗುತ್ತದೆ. ಸೀನಿಯಾರಿಟಿ ವಿವರಗಳು, ಹಣಕಾಸಿನ ವಿವರಗಳು ಮುಂತಾದ ನಾನಾ ರೀತಿಯ ಅಂಶಗಳನ್ನು ಪರಿಶೀಲನೆ ಮಾಡಿದ ನಂತರ ಸೂಕ್ತ ತೀರ್ಮಾನ ಕೈಕೊಳ್ಳುತ್ತೇವೆ.

ಶ್ರೀ ಎಚ್. ಎ. ನಂಜೇಗೌಡ.—(ಅ) ಪ್ರಶ್ನೆಗೆ ಉತ್ತರವಾಗಿ ಹಳೆಯ ಮೈಸೂರು ಪ್ರದೇಶಕ್ಕೆ ಒಂದು ರೀತಿಯ ನಿಯಮ ಇದೆ, ಇತರ ಪ್ರದೇಶಗಳಿಗೆ ಒಂದು ರೀತಿಯ ನಿಯಮ ಇದೆ ಎಂದು ಹೇಳಿದ್ದೀರಿ ಎಲ್ಲವನ್ನು ಸೇರಿಸಿ ಒಂದು ಏಕ ರೀತಿಯ ನಿಯಮವನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ?
1-30 P. M.

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಅದನ್ನು ಮಾಡಬೇಕೆಂದು ಸರ್ಕಾರ ವಿಚಾರ ಮಾಡುತ್ತಿದೆ ಮತ್ತು ಆ ಬಗ್ಗೆ ರೂಲ್ಸ್‌ನ್ನು ಮಾಡುತ್ತಿದ್ದೇವೆ.

ಶ್ರೀ ಕೆ. ಎಂ. ತಮ್ಮಯ್ಯ.—ಈ ವರ್ಗಾವಣೆ ವಿಚಾರದಲ್ಲಿ ಹೈಕೋರ್ಟಿನಲ್ಲಿ ಒಂದು ರಿಟ್ ಅರ್ಜಿ ಇತ್ತು, ಈ ರೀತಿ ರಿಟ್ ಅರ್ಜಿ ಇದ್ದುದರಿಂದ ಹೈಕೋರ್ಟಿನವರು ಪುರಸಭೆಯ ಕಮಿಟಿಯವರಿಗೆ ಆಗಲಿ ಅಥವಾ ಪುರಸಭೆಯ ಸೆಕ್ರೆಟರಿಯವರಿಗಾಗಲೀ ವರ್ಗಾವಣೆ ಮಾಡುವ ಅಧಿಕಾರ ಇಲ್ಲ ಎಂದು ಹೇಳಿದ್ದು ನಿಜವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಹೈಕೋರ್ಟಿನಲ್ಲಿ ಕೇಸ್ ಇದ್ದರೆ ಆ ಬಗ್ಗೆ ಸರ್ಕಾರಕ್ಕೆ ಯಾವ ಕ್ರಮ ತೆಗೆದುಕೊಳ್ಳುವುದಕ್ಕೂ ಆಗುವುದಿಲ್ಲ. ಸರ್ಕಾರದವರು ಏನಾದರು ತಪ್ಪು ಮಾಡಿದ್ದರೆ ಅದನ್ನು ಹೈಕೋರ್ಟಿನಲ್ಲಿ ಛಾಲೆಂಜ್ ಮಾಡುವುದಕ್ಕೆ ಪ್ರತಿಯೊಬ್ಬ ಪ್ರಜೆಗೂ ಅಧಿಕಾರ ಇದೆ. ಮತ್ತು ಕಾಯಿದೆ ಪ್ರಕಾರ ಈ ರೀತಿ ನಡೆದುಕೊಳ್ಳಬೇಕೆಂದು ಹೈಕೋರ್ಟಿನವರು ಸರ್ಕಾರಕ್ಕೆ ಆದೇಶ ಕೊಟ್ಟರೆ ಅದರಂತೆ ನಾವು ನಡೆದುಕೊಳ್ಳುತ್ತೇವೆ.

TRANSFER OF ASSETS OF AGRICULTURE DEPARTMENT TO AGRO INDUSTRIES CORPORATION.

360. Sri I. SOMASEKHARAPPA (Hosanagar).—

Will the Minister for Agriculture be pleased to state :—

(*a*) whether the Government has taken a decision to transfer the assets of the Agriculture Engineering Section of the Agriculture Department to the Agro Industries Corporation ;

(*b*) if so, the value of the assets of the Agriculture Engineering Section as per the books of the Department ;

(*c*) the authority for assessing the value of the assets of the Agriculture Engineering Section before it is handed over to the Agro-Industries Corporation ;